## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1052

ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.02.2023

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಗಸ್ತಿ ಕೆಂಪನಹಳ್ಳಿಯ ಅಗ್ರಹಾರ ಬಡಾವಣೆಯಲ್ಲಿರುವ ವಿಧಾನಸೌಧ 3ನೇ ಹಂತದ ಬಡಾವಣೆಗೆ ಬಸ್ ಸೌಲಭ್ಯವನ್ನು ಕಲ್ಪಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಪ್ರಸ್ತುತ ಗಸ್ತಿ ಕೆಂಪನಹಳ್ಳಿ ಅಗ್ರಹಾರ ಬಡಾವಣೆಯಲ್ಲಿರುವ ವಿಧಾನಸೌಧ 3ನೇ ಹಂತದ ಬಡಾವಣೆಗೆ ಹೊಂದಿಕೊಂಡಿರುವ ವಿಧಾನಸೌಧ 1ನೇ ಹಂತ ಬಡಾವಣೆಯಿಂದ, ಸಾಯಿದುರ್ಗಾ, ಕೋಗಿಲು ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣದ ಮಾರ್ಗ ಸಂಖ್ಯೆ: 284-ಕೆಎರಲ್ಲಿ 1 ಅನುಸೂಚಿಯಿಂದ 8 ಸುತ್ತುವಳಿಗಳನ್ನು ಪ್ರಯಾಣಿಕರ ದಟ್ಟಣೆಗನುಗುಣವಾಗಿ, ನಿಯಮಿತವಾಗಿ ಆಚರಣೆ ಗೊಳಿಸಲಾಗುತ್ತಿದೆ.<br><br>ಶ್ರೀ ಮುನೇಶ್ವರ, ಕೃಷ್ಣನಗರ, ಬಾಲಾಜಿ, ಶ್ರೀನಿವಾಸ ಗಾರ್ಡನ್, ಅಯ್ಯಪ್ಪ, ಕುವೆಂಪು, ಅಗ್ರಹಾರ, ಮಂಜುನಾಥ, ಸಾಯಿಬಾಬ, ಅನ್ನಪೂರ್ಣೇಶ್ವರಿ, ಕೆ.ಪಿ.ಎಸ್.ಸಿ ಬಡಾವಣೆಗಳ ವಿದ್ಯಾರ್ಥಿಗಳು, |
| ಆ. | ಈ ಮುಖ್ಯ ರಸ್ತೆಯ ಎಡ-ಬಲ ಭಾಗದಲ್ಲಿ ಕ್ರಮವಾಗಿ ಶ್ರೀ ಮುನೇಶ್ವರ, ಕೃಷ್ಣನಗರ, ಬಾಲಾಜಿ, ಶ್ರೀನಿವಾಸ ಗಾರ್ಡನ್, ಅಯ್ಯಪ್ಪ, ಕುವೆಂಪು, ಅಗ್ರಹಾರ, ಮಂಜುನಾಥ, ಸಾಯಿಬಾಬ, ಅನ್ನಪೂರ್ಣೇಶ್ವರಿ, ಕೆ.ಪಿ.ಎಸ್.ಸಿ ಬಡಾವಣೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ. | ಈ ಎಲ್ಲಾ ಬಡಾವಣೆಗಳಲ್ಲಿ ವಾಸವಿರುವ ಸಹಸ್ರಾರು ಸಾರ್ವಜನಿಕರಿಗೆ ಉತ್ತಮ ಬಸ್ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | |
| ಈ. | ಇಲ್ಲಿನ ವಿದ್ಯಾರ್ಥಿಗಳಿಗೆ, ಉದ್ಯೋಗಸ್ಥರಿಗೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಬಸ್ | |

| | | |
|---|---|---|
| | ಸೌಕರ್ಯವಿಲ್ಲದೇ ತುಂಬಾ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಸಮಯದೊಳಗೆ ಈ ಪ್ರಯಾಣಿಕರಿಗೆ ಬಸ್ ಸೌಲಭ್ಯವನ್ನು ಒದಗಿಸಲಾಗುವುದು? (ವಿವರ ನೀಡುವುದು) | ಉದ್ಯೋಗಸ್ಥರು ಸದರಿ ಸಾರಿಗೆ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. |

ಸಂಖ್ಯೆ: ಟಿಡಿ 61 ಟಿಸಿಕ್ಯೂ 2023

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಠ ಪಂಗಡಗಳ
ಕಲ್ಯಾಣ ಸಚಿವರು